

# DSERT SOLUTIONS

VIDWATH™
INNOVATIVE SOLUTIONS PVT. LTD

**ಗದ್ಯ – 2** **ಅಸಿ–ಮಸಿ–ಕೃಷಿ**

## ಪ್ರಶ್ನೋತ್ತರಗಳು

### ಅ. ಕೆಳಗೆ ನೀಡಲಾಗಿರುವ ಗಾದೆ ಮಾತುಗಳನ್ನು ಪೂರ್ಣಗೊಳಿಸಿರಿ:

**1. ಪೆನ್ನು ಖಡ್ಗಕ್ಕಿಂತ**

**ಉತ್ತರ:** ಹರಿತ

**2. ಒಕ್ಕಲಿಗ ಒಕ್ಕದಿರೆ**

**ಉತ್ತರ:** ಜಗವೆಲ್ಲ ಬಿಕ್ಕುವುದು

**3. ಕೋಟಿ ವಿದ್ಯೆಗಳಲಿ**

**ಉತ್ತರ:** ಮೇಟಿ ವಿದ್ಯೆಯೇ ಮೇಲು

**4. ಹಾಸಿಗೆ ಇದ್ದಷ್ಟು**

**ಉತ್ತರ:** ಕಾಲು ಚಾಚು

### ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ದೇಶದ ಉದ್ಧಾರ ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?**

**ಉತ್ತರ:**

‘ದೇಶದ ಉದ್ಧಾರ ಸೈನಿಕ, ಸಾಹಿತಿ ಮತ್ತು ರೈತರನ್ನು ಅವಲಂಬಿಸಿದೆ’ ಎಂದು ಲೇಖಕರು ಹೇಳಿದ್ದಾರೆ.

**ಪ್ರಶ್ನೆ 2:**

**ಅಸಿ–ಮಸಿ ಎಂದರೇನು?**

**ಉತ್ತರ:**

ಅಸಿ ಎಂದರೆ ಯುದ್ಧ (ಸೈನಿಕರು), ಮಸಿ ಎಂದರೆ ಸಾಹಿತ್ಯ ರಚನೆ.

**ಪ್ರಶ್ನೆ 3:**

**ಈ ನಾಡಿನ ಬೆನ್ನೆಲುಬು ಯಾರು?**

**ಉತ್ತರ:**

ಈ ನಾಡಿನ ಬೆನ್ನೆಲುಬು ಕೃಷಿಕ.

**ಪ್ರಶ್ನೆ 4:**

**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?**

**ಉತ್ತರ:**

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ.

**ಪ್ರಶ್ನೆ 5:**

**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?**

**ಉತ್ತರ:**

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆಯು 'ಪಾಲ್ ಹ್ಯಾರಿಸ್' ಪ್ರಶಸ್ತಿ ನೀಡಿ ಗೌರವಿಸಿದೆ.





## ಇ.ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?**

**ಉತ್ತರ:**

'ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ, ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯುತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ', ಇವು ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾಗಿವೆ.

**ಪ್ರಶ್ನೆ 2:**

**ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?**

**ಉತ್ತರ:**

ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧವನ್ನು ಸಾರಿ ನಮ್ಮನ್ನು ಅವರ ಗುಲಾಮರನ್ನಾಗಿ ಮಾಡಿಕೊಳ್ಳುವರು. ಬಲಿಷ್ಟ ದೇಶ ಎಲ್ಲರನ್ನು ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು.

**ಪ್ರಶ್ನೆ 3:**

**ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ?**

**ಉತ್ತರ:**

ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆಂದರೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರವನ್ನು ಉರುಳಿಸಿ ಮತ್ತೊಂದು ಸರ್ಕಾರ ತರಬಲ್ಲದು. ಈ ನಿಟ್ಟಿನಲ್ಲಿ ಬರವಣಿಗೆ ಹೆಚ್ಚು ಶಕ್ತಿಶಾಲಿಯಾಗಿದೆ.

**ಪ್ರಶ್ನೆ 4:**

**ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?**

**ಉತ್ತರ:**

ರೈತರು ಎದುರಿಸುತ್ತಿರುವ ಸಮಸ್ಯೆಗಳೆಂದರೆ ಒಂದೆಡೆ ನಿಸರ್ಗದ ಜೊತೆ ಹೋರಾಟ ಮಾಡಬೇಕು, ಇನ್ನೊಂದು ಕಡೆ ಸಕಾಲಕ್ಕೆ ಸರಿಯಾಗಿ ಮಳೆ ಬರುತ್ತಿಲ್ಲ, ಉತ್ತಮ ಬೀಜ ಸಿಗುವುದಿಲ್ಲ, ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ.

**ಪ್ರಶ್ನೆ 5:**

**ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?**

**ಉತ್ತರ:**

ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಯಾವ ಬೆಳೆಯನ್ನೂ ತೆಗೆಯಲಾಗುವುದಿಲ್ಲ. ಆಹಾರವಿಲ್ಲದೇ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಜೀವನ ನಡೆಸಲು ಸಾಧ್ಯವಿಲ್ಲ.

ಯಾವ ಕಾರ್ಖಾನೆಯಿಂದಲೂ ಅಕ್ಕಿ, ರಾಗಿ, ಟೊಮೆಟೊ ತಯಾರಿಸಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಲೇಬೇಕು, ಬೆಳೆ ಬೆಳೆಯಬೇಕು.

**ಪ್ರಶ್ನೆ 6:**

**ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?**

**ಉತ್ತರ:**

ಸರ್ವಜ್ಞ ಕವಿಯು ಕೃಷಿಯ ಬಗ್ಗೆ 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು. ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂಬ ವಚನ ಹೇಳಿದ್ದಾರೆ.

**ಈ. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

**ಪ್ರಶ್ನೆ 1:**

**ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ?**

**ಉತ್ತರ:**

ದೇಶದ ಸಂರಕ್ಷಣೆಯಲ್ಲಿ ಸೈನಿಕರ ಪಾತ್ರ ಹಿರಿದಾಗಿರುತ್ತದೆ. ಏಕೆಂದರೆ ಅವರು ತಮ್ಮ ತಾಯ್ನಾಡಿಗಾಗಿ ಸ್ವಂತ ಮನೆಯನ್ನು ತೊರೆದು, ಬಂಧು–ಬಾಂಧವರಿಂದ ದೂರವಾಗಿ ಗಡಿ ಕಾಯುತ್ತಿರುತ್ತಾರೆ. ನಮ್ಮ ದೇಶದ ಮೇಲೆ ಯಾರಾದರೂ ದಾಳಿ ಮಾಡುವರೇನೋ ಎನ್ನುವ ಸಂದರ್ಭದಲ್ಲಿಯೇ ಯಾವಾಗಲೂ ಕಾರ್ಯ ಪ್ರವೃತ್ತರಾಗಿಯೇ ಇರುತ್ತಾರೆ. ಹಗಲು ರಾತ್ರಿ ಗಡಿ ಕಾಯುವ ಸೈನಿಕರು ಮಳೆ, ಚಳಿ, ಬಿಸಿಲೆನ್ನದೇ ಎಷ್ಟೇ ಕಷ್ಟ ಬಂದರೂ, ಧೈರ್ಯದಿಂದ ಎದುರಿಸುತ್ತಾರೆ. ಸೈನಿಕ ಬಲ ಇದ್ದಾಗ ಮಾತ್ರ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶಕ್ಕೆ ಆಕ್ರಮಣ ಮಾಡಿ ಯುದ್ಧದಲ್ಲಿ ನಮ್ಮನ್ನು ಸೋಲಿಸಿ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದ್ದರಿಂದ ದೇಶದ ರಕ್ಷಣೆಗೆ ಸೈನಿಕರು ಅತ್ಯಗತ್ಯ. ಸೈನಿಕರು

ಪ್ರಬಲರಿದ್ದಾಗ ಮಾತ್ರ ದೇಶವನ್ನು ರಕ್ಷಿಸಿಕೊಳ್ಳಲು ಸಾಧ್ಯ. ದೇಶದಲ್ಲಿ ಸೈನ್ಯವನ್ನು ಮೂರು ವಿಭಾಗಗಳಾಗಿ ವಿಭಾಗಿಸಿ (ಭೂಸೇನೆ, ವಾಯುಸೇನೆ, ಜಲ ಸೇನೆ), ಅವುಗಳ ಸಂರಕ್ಷಣೆ, ಸೈನಿಕರ ಜೀವನ ಮಟ್ಟ ನಿರ್ವಹಣೆ, ಅವರಿಗೆ ವೇತನ, ದೇಶದ ಭದ್ರತಾ ವೆಚ್ಚದ ನಿರ್ವಹಣೆ ಮುಂತಾದವುಗಳಿಗೆ ಹೆಚ್ಚಿನ ಹಣದ ಅವಶ್ಯಕತೆಯಿದ್ದು, ನಮ್ಮ ಬಜೆಟ್‌ನಲ್ಲಿ ಹೆಚ್ಚಿನ ಭಾಗವನ್ನು ರಕ್ಷಣಾ ಇಲಾಖೆಗೆ ಮೀಸಲಾಗಿಡಲಾಗಿದೆ.

**ಪ್ರಶ್ನೆ 2:**

**ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು?**

**ಉತ್ತರ:**

ಲೇಖಕರು ಅಸಿಯ ನಂತರ ಮಸಿಯ ಪ್ರಾಮುಖ್ಯತೆ ಬಗ್ಗೆ ಅಂದರೆ ಸಾಹಿತ್ಯದ ಬಗ್ಗೆ ವಿವರಿಸಿದ್ದಾರೆ. ಅಸಿಗಿಂತ ಮಸಿ ಮುಖ್ಯವಾಗಿದೆ. ಸಾಹಿತ್ಯದ ರಚನೆಯಿಂದ ಉನ್ನತಿ ಸಾಧಿಸಬಹುದಾಗಿದೆ. ಲೇಖಕರು 'ಪೆನ್ನು ಖಡ್ಗಕ್ಕಿಂತ ಹರಿತ' ಎಂದು ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಖಡ್ಗದಿಂದ ಸಾಧಿಸಲಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಉದಾಹರಣೆಗೆ ಒಂದು ಲೇಖನದಿಂದ ಆ ರಾಜ್ಯ ಅಥವಾ ದೇಶದ ಸರ್ಕಾರವನ್ನು ಉರುಳಿಸಿ ಮುಂದೊಂದು ದಿನ ಹೊಸ ಸರ್ಕಾರವನ್ನೇ ರಚಿಸಬಹುದು ಅಂತಹ ಎಷ್ಟೋ ಉದಾಹರಣೆಗಳನ್ನ ದಿನನಿತ್ಯ ಪತ್ರಿಕೆಗಳಲ್ಲಿ ಕಾಣಬಹುದು. ಇದರರ್ಥ ಬರವಣಿಗೆ ಎಷ್ಟೊಂದು ಪರಿಣಾಮಕಾರಿ ಎಂದು ಬಿಂಬಿಸಲಾಗಿದೆ. ಸಾಹಿತಿಗಳಿಗೆ ನಮ್ಮ ನಾಡಿನಲ್ಲಿ ಅಪಾರ ಗೌರವವಿದೆ. ಈ ಗೌರವವಿರುವುದು ಅವರ ಸಾಹಿತ್ಯದ ಸತ್ವದಿಂದಾಗಿ ಮಾತ್ರ. ಸಾಹಿತಿಗಳು ಅಭಿವೃದ್ಧಿಯ ಮೆಟ್ಟಿಲೇರಲು ಅವರ ಸಾಹಿತಿಗಳೇ ಮೂಲಾಧಾರ ಎಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಹಿಂದೆ ಬದುಕಿದ್ದ ಬಸವಾದಿ ಶಿವಶರಣ ವಚನಗಳು, ದಾಸರ ಕೀರ್ತನೆಗಳು, ಕುವೆಂಪು, ಬೇಂದ್ರೆಯವರ ಕಾವ್ಯಗಳು ಇಂದಿಗೂ ಜನರ ಮೇಲೆ ಸತ್ಪರಿಣಾಮ ಬೀರಲು ಅವರಲ್ಲಿರುವ ಸಾಹಿತ್ಯದ ಸತ್ವವೇ ಮೂಲ ಕಾರಣವಾಗಿದೆ, ದೇಶದ ಸಮೃದ್ಧಿ ಹಾಗೂ ಪ್ರಗತಿಯೂ ಮಸಿಯನ್ನೂ ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ.

**ಪ್ರಶ್ನೆ 3:**

**'ಕೃಷಿಕ ನಾಡಿನ ಬೆನ್ನೆಲುಬು' ಈ ಮಾತನ್ನು ಸಮರ್ಥಿಸಿರಿ.**

**ಉತ್ತರ:**

ಲೇಖಕರು ಅಸಿ ಮತ್ತು ಮಸಿಗಳಿಗಿಂತ ಮಹತ್ವವಾದದ್ದು ಕೃಷಿ ಎಂದು ಹೇಳಿದ್ದಾರೆ. ಅಂದರೆ 'ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು' ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಇದರ ಅರ್ಥ ಒಂದು ವೇಳೆ ಕೃಷಿಯನ್ನು ಮಾಡದೆ ಕೃಷಿಕ ಸತ್ಯಾಗ್ರಹ ಮಾಡಿದರೆ ನಾವು ಭಿಕ್ಷುಕರಂತಾಗುತ್ತೇವೆ. ತಿನ್ನಲು ಆಹಾರವಿಲ್ಲದೆ ನರಳುತ್ತೇವೆ. ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ? ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಇದಕ್ಕೆಲ್ಲ ಭೂಮಿಯೇ ಬೇಕು. ರೈತರು ಬೆವರು ಸುರಿಸಿ ಭೂಮಿಯನ್ನ ಹದಮಾಡಿ ಬೆಳೆಯನ್ನು ಬೆಳೆಯಲೇ ಬೇಕು. ಹಾಗಾದಾಗ ಮಾತ್ರ ಪ್ರಗತಿ ಸಾಧ್ಯ. ಈ ದೇಶದ ರಾಜಕಾರಣಿಗಳು, ಅಧಿಕಾರಿಗಳು, ಬಂಡವಾಳಶಾಹಿಗಳು, ವ್ಯಾಪಾರಸ್ಥರು, ಸಾಹಿತಿಗಳು, ಸಂಶೋಧಕರು, ವಿಜ್ಞಾನಿಗಳು ಹೀಗೆ ಪ್ರತಿಯೊಬ್ಬರೂ ಬದುಕುತ್ತಿರುವುದು ಕೃಷಿಕರನ್ನು ಅವಲಂಬಿಸಿಯೇ. ಸರ್ವಜ್ಞ 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕೆಡಗುಂ' ಎಂದಿರುವುದು ಗಮನಾರ್ಹವಾಗಿದೆ. ಈ ಎಲ್ಲಾ ಅಂಶಗಳಿಂದ ಕೃಷಿಕನೇ ಈ ನಾಡಿನ ಬೆನ್ನೆಲುಬು ಎಂದು ತಿಳಿಯಬಹುದು.

## ಉ. ಸಂದರ್ಭದೊಡನೆ ವಿವರಿಸಿರಿ:

**1. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ'ಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ–ಮಸಿ–ಕೃಷಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕೃಷಿ ಮತ್ತು ರೈತನ ಸಂಕಷ್ಟ ಮತ್ತು ಅದರ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಮೇಲಿನ ಮಾತನ್ನು ಹೇಳಿದ್ದಾರೆ.

**ವಿವರಣೆ:** ಅಸಿ–ಮಸಿಗಿಂತ ಕೃಷಿ ಮಹತ್ವದ್ದು ಅಂದರೆ ದೇಶದ ಸೈನಿಕರು ಮತ್ತು ಸಾಹಿತ್ಯಕ್ಕಿಂತ ಕೃಷಿ ವೃತ್ತಿ ಪ್ರಮುಖವಾಗಿದೆ. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಯಾವ ಬೆಳೆಯನ್ನೂ ತೆಗೆಯಲಾಗುವುದಿಲ್ಲ. ಆಹಾರವಿಲ್ಲದೇ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಜೀವನ ನಡೆಸಲು ಸಾಧ್ಯವಿಲ್ಲ. ಯಾವ ಕಾರ್ಖಾನೆಯಿಂದಲೂ ಅಕ್ಕಿ, ರಾಗಿ, ಟೊಮೆಟೊ ತಯಾರಿಸಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಲೇಬೇಕು, ಬೆಳೆ ಬೆಳೆಯಬೇಕು.

**ವಿಶೇಷತೆ:** 'ವ್ಯವಸಾಯವೇ ಮುಖ್ಯ, ವ್ಯವಸಾಯವಿಲ್ಲದೇ ದೇಶ ಪ್ರಗತಿ ಹೊಂದಲು ಅಸಾಧ್ಯ' ಎಂಬುದು ಇಲ್ಲಿಯ ವಿಶೇಷವಾಗಿದೆ.

**2. ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ'ಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ–ಮಸಿ–ಕೃಷಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ರೈತರು ನಿರ್ಲಕ್ಷ್ಯಕ್ಕೊಳಗಾದವರು, ಅವರು ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾರೆ ಎಂದು ವಿವರಿಸುವಾಗ ಲೇಖಕರು ಮೇಲಿನಂತೆ ಅಭಿಪ್ರಾಯ ಪಟ್ಟಿದ್ದಾರೆ.

**ವಿವರಣೆ:** ರೈತರಷ್ಟು ಕಷ್ಟಪಡುವವರು ಮತ್ತೊಬ್ಬರಿಲ್ಲ. ಅವರಂತೆ ತೊಂದರೆ ಅನುಭವಿಸುವವರೂ ಬೇರೊಬ್ಬರಿಲ್ಲ. ಇತ್ತೀಚಿನ ದಿನದಲ್ಲಿ ರೈತರು ಸಾಕಷ್ಟು ಬವಣೆಗಳನ್ನು ಎದುರಿಸುತ್ತಿದ್ದಾರೆ. ಮಳೆಯ ಅಭಾವ, ಇಲ್ಲವೆ ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು ಇತ್ಯಾದಿ. ಹೀಗಾಗಿ ಈ ಬದುಕೇ ನಶ್ವರ ಎನ್ನುವ ಭಾವನೆ ರೈತರಲ್ಲಿ ಮೂಡಿದರೆ ಅದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಆದರೂ ರೈತರು

ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚುತ್ತಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

**ವಿಶೇಷತೆ:** ರೈತರು ಹಲವಾರು ಕಷ್ಟಗಳನ್ನು ಎದುರಿಸಿ, 'ಬದುಕೇ ನಶ್ವರ' ಎನ್ನುವ ಭಾವನೆಯಿದ್ದರೂ, ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬದುಕನ್ನು ಸಾಗಿಸುತ್ತಿದ್ದಾರೆ ಎಂಬ ಹೇಳಿಕೆಯು ಈ ಸಂದರ್ಭದ ವಿಶೇಷತೆಯಾಗಿದೆ.

**3. ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ'ಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ–ಮಸಿ–ಕೃಷಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲೇಖಕರು ಕೃಷಿಕರ ಮುಗ್ಧತೆಯನ್ನು ತಿಳಿಸಿ ಹೇಳುವ ಸಂದರ್ಭದಲ್ಲಿ ಮೇಲಿನ ಮಾತನ್ನು ಹೇಳಿದ್ದಾರೆ.

**ವಿವರಣೆ:** ರೈತರು ಕಳಪೆ ಬೀಜ ಸಿಕ್ಕರೂ ಉತ್ತಮವಾದ ಬೆಳೆ ಬೆಳೆಯುತ್ತಾರೆ. ಸರಿಯಾಗಿ ಮಳೆ ಬಾರದಿದ್ದರೂ, ನೀರನ್ನು ಸಂಗ್ರಹಿಸಿ ಭೂಮಿಯನ್ನು ಉಳುಮೆ ಮಾಡುತ್ತಾರೆ. ಇಷ್ಟೆಲ್ಲಾ ಕಷ್ಟ ಪಟ್ಟು ಬೆಳೆದರೂ, ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಮಧ್ಯವರ್ತಿಗಳಿಂದ ಮೋಸ ಹೋಗುತ್ತಾರೆ. ರೈತರು ತಾವು ಮೋಸ ಹೋದರು ಇನ್ನೊಬ್ಬರಿಗೆ ಮೋಸ ವಂಚನೆ ಮಾಡುವುದಿಲ್ಲ ಎಂದು ಲೇಖಕರು ಹೇಳುವಾಗ ಪ್ರಸ್ತುತ ವಾಕ್ಯವು ಬಂದಿದೆ.

**ವಿಶೇಷತೆ:** ರೈತರ ಮುಗ್ಧತೆ ಹಾಗೂ ಅವರ ಪ್ರಾಮಾಣಿಕತೆಯ ವಿಶೇಷತೆಯನ್ನು ಇಲ್ಲಿ ಕಾಣಬಹುದಾಗಿದೆ.

**4. ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ'ಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ–ಮಸಿ–ಕೃಷಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲೇಖಕರು ಅಸಿಗಿಂತ (ಯುದ್ಧ) ಮಸಿ (ಸಾಹಿತ್ಯ) ಮುಖ್ಯವಾದುದು ಹಾಗೂ ಸಾಹಿತ್ಯದ ಮಹತ್ವದ ಬಗ್ಗೆ ತಿಳಿಸಿ ಹೇಳುವ ಸಂದರ್ಭದಲ್ಲಿ ಮೇಲಿನ ವಾಕ್ಯ ಬಂದಿದೆ.

**ವಿವರಣೆ:** ರಕ್ಷಣೆಗಿಂತ ಮುಖ್ಯವಾದುದು ಮಸಿ. ಮಸಿ ಎಂದರೆ ಸಾಹಿತ್ಯ ರಚನೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಮಾತೇ ಇದೆ. ಅಂದರೆ 'ಪೆನ್ನು ಖಡ್ಗಕ್ಕಿಂತ ಹರಿತ ಎಂದು ಉಲ್ಲೇಖಿಸಿದ್ದಾರೆ. ಖಡ್ಗದಿಂದ (ಯುದ್ಧದಿಂದ) ಸಾಧಿಸಲಾಗದ ಎಷ್ಟೋ ಕೆಲಸಗಳನ್ನು ಒಂದು ಪೆನ್ನಿನ (ಲೇಖನಿ) ಮೂಲಕ ಗೆಲ್ಲಬಹುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರವಣಿಗೆ, ಸಾಹಿತ್ಯ, ಲೇಖನಗಳು ಹೆಚ್ಚು ಶಕ್ತಿಶಾಲಿಯಾದದ್ದು ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು ಆ ಸಾಹಿತ್ಯದ ಸತ್ವದಿಂದಾಗಿ. ಅಂಥ ಸಾಹಿತಿಗಳು ನಾಡಿನಲ್ಲಿ ಹೆಚ್ಚಾದಷ್ಟು ಸಮಾಜ ಪ್ರಗತಿಯ ಮೆಟ್ಟಿಲೇರಲು ಸಾಧ್ಯ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

**ವಿಶೇಷತೆ:** ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು 'ಸಾಹಿತ್ಯದ ಸತ್ವ'ದಿಂದ ಮಾತ್ರ ಸಾಧ್ಯ ಎನ್ನುವ ವಾಕ್ಯವು ವಿಶೇಷವಾಗಿದೆ.

## ಭಾಷಾಭ್ಯಾಸ

### ಅ. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ:

**ಅ. ಒಬ್ಬೊಬ್ಬರು** – ಒಬ್ಬರು + ಒಬ್ಬರು = ಲೋಪಸಂಧಿ

**ಆ. ಸರ್ವಾಧಿಕಾರಿ** – ಸರ್ವ + ಅಧಿಕಾರಿ = ಸವರ್ಣದೀರ್ಘಸಂಧಿ

**ಇ. ಬೆನ್ನೆಲುಬು** – ಬೆನ್ನು + ಎಲುಬು = ಲೋಪಸಂಧಿ

**ಈ. ಸತ್ಯಾಗ್ರಹ** – ಸತ್ಯ + ಆಗ್ರಹ = ಸವರ್ಣದೀರ್ಘಸಂಧಿ

## ಗದ್ಯ – 2 ಅಸಿ–ಮಸಿ–ಕೃಷಿ

### ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ:

| | | |
|---|---|---|
| **ಅ. ಪ್ರಗತಿ** | × | ಅಧೋಗತಿ |
| **ಆ. ಅವಲಂಬನೆ** | × | ಸ್ವಾವಲಂಬನೆ |
| **ಇ. ಪ್ರಬಲ** | × | ದುರ್ಬಲ |
| **ಈ. ಸರ್ವಾಧಿಕಾರಿ** | × | ಉದಾರವಾದಿ |
| **ಉ. ಸತ್ಪರಿಣಾಮ** | × | ದುಷ್ಪರಿಣಾಮ |
| **ಊ. ಆಶಾವಾದಿ** | × | ನಿರಾಶಾವಾದಿ |
| **ಋ. ಅತಿವೃಷ್ಟಿ** | × | ಅನಾವೃಷ್ಟಿ |

### ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

**ಅ. ಉತ್ಪ್ರೇಕ್ಷೆ** – ಪತ್ರಿಕೆಗಳಲ್ಲಿ ಕೆಲವೊಮ್ಮೆ ಸಿನಿಮಾದ ಬಗ್ಗೆ ಉತ್ಪ್ರೇಕ್ಷೆಯಿಂದ ಕೂಡಿದ ಪದಗಳಿಂದ ವರ್ಣಿಸುತ್ತಾರೆ.

**ಆ. ಸತ್ಪರಿಣಾಮ** – ಹಿಂದಿನ ಕಾವ್ಯ ರಚನೆಗಳು ಈಗಿನ ಯುವ ಜನರ ಮೇಲೆ ಸತ್ಪರಿಣಾಮ ಬೀರುತ್ತವೆ.

**ಇ. ಸಮೃದ್ಧಿ** – ಕಾಲ ಕಾಲಕ್ಕೆ ಮಳೆ ಬೆಳೆಯಾದರೆ ಎಲ್ಲೆಡೆ ಸಮೃದ್ಧಿಯನ್ನು ಕಾಣಬಹುದು.

**ಈ. ಸತ್ಯಾಗ್ರಹ** – ಗಾಂಧೀಜಿಯವರು ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹ ನಡೆಸಿದರು.

**ಉ. ಸೆಣಸು** – ಇತ್ತೀಚೆಗೆ ಸರಿಯಾಗಿ ಮಳೆ ಬಾರದ ಕಾರಣ ರೈತರು ಪ್ರಕೃತಿಯೊಡನೆ ಸೆಣಸುವಂತಾಗಿದೆ.

**ಋ. ಉಪೇಕ್ಷೆ** – ವೈದ್ಯರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದ್ದರಿಂದ ರೋಗಿಗಳು ಉಪೇಕ್ಷೆಗೊಳಗಾದರು.

## ಈ. ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ:

| | | |
|---|---|---|
| **ಅ. ವರ್ಷ** | – | ವರುಷ |
| **ಆ. ಭೂಮಿ** | – | ಭುವಿ |
| **ಇ. ಕತೆ** | – | ಕಥೆ |
| **ಈ. ಬೇಸಾಯ** | – | ವ್ಯವಸಾಯ |
| **ಉ. ಕಾರ್ಯ** | – | ಕಜ್ಜ |
| **ಊ. ಕಾವ್ಯ** | – | ಕಬ್ಬ |

## ಉ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:

| | | | | | | |
|---|---|---|---|---|---|---|
| **ಅ. ಅಸಿ** | : | **ಯುದ್ಧ** | :: | **ಮಸಿ** | : | ಸಾಹಿತ್ಯ |
| **ಆ. ಕ್ರಿಮಿಕೀಟ** | : | **ಜೋಡುನುಡಿ** | :: | **ದೊಡ್ಡ ದೊಡ್ಡ** | : | ದ್ವಿರುಕ್ತಿ |
| **ಇ. ಯುದ್ಧ** | : | **ಜುದ್ಧ** | :: | **ಶ್ರೀ** | : | ಸಿರಿ |
| **ಈ. ಯೋಧ** | : | **ರಕ್ಷಣೆ** | :: | **ರೈತ** | : | ಉಳುವುದು |

## ಸೈದ್ಧಾಂತಿಕ ವ್ಯಾಕರಣ

**ಸಂಸ್ಕೃತ ಸಂಧಿಗಳು:**

ಸಂಧಿ ಆಗುವ ಎರಡು ಧ್ವನಿ ಘಟಕಗಳು ಸಂಸ್ಕೃತವಾಗಿದ್ದರೆ ಅದನ್ನು **'ಸಂಸ್ಕೃತ ಸಂಧಿ'** ಎಂದು ಕರೆಯಲಾಗುತ್ತದೆ. ಇದರಲ್ಲಿ ಸಂಸ್ಕೃತ ಸ್ವರಸಂಧಿಗಳು ಹಾಗೂ ಸಂಸ್ಕೃತ ವ್ಯಂಜನ ಸಂಧಿಗಳು ಎಂದು ಎರಡು ವಿಭಾಗಗಳಿವೆ. ಮೊದಲಿಗೆ ಸಂಸ್ಕೃತ ಸ್ವರ ಸಂಧಿಗಳನ್ನು ತಿಳಿಯೋಣ.

**ಸಂಸ್ಕೃತ ಸ್ವರ ಸಂಧಿಗಳು:**

**1. ಸವರ್ಣದೀರ್ಘ ಸಂಧಿ:** ಎರಡು ಸವರ್ಣ ಸ್ವರಗಳ (ಅ+ಆ, ಇ+ಈ, ಉ+ಊ, ಎ+ಏ, ಒ+ಓ) ನಡುವೆ ಸಂಧಿ ಕಾರ್ಯ ನಡೆದಾಗ ಅವೆರಡರ ಸ್ಥಾನದಲ್ಲಿ ಅದೇ ವರ್ಣದ ದೀರ್ಘಸ್ವರವು ಆದೇಶವಾಗಿ ಬರುವುದನ್ನು 'ಸವರ್ಣದೀರ್ಘ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ದೇವ | + | ಆಲಯ | = ದೇವಾಲಯ |
| | ಮಹಾ | + | ಅನುಭಾವ | = ಮಹಾನುಭಾವ |
| | ಗಿರಿ | + | ಇಂದ್ರ | = ಗಿರೀಂದ್ರ |

**2. ಗುಣ ಸಂಧಿ:** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಇ' ಅಥವಾ 'ಈ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಸ್ವರವು, 'ಉ' ಅಥವಾ 'ಊ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಸ್ವರವು, ಅದೇ ರೀತಿ 'ಋ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಆದೇಶವಾಗಿ ಬರುವುದನ್ನು 'ಗುಣ ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ವೀರ | + | ಈಶ | = ವೀರೇಶ |
| | ಮಹಾ | + | ಉತ್ಸವ | = ಮಹೋತ್ಸವ |
| | ರಾಜ | + | ಋಷಿ | = ರಾಜರ್ಷಿ |





**3. ವೃದ್ಧಿ ಸಂಧಿ:** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಏ'ಅಥವಾ 'ಐ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಸ್ವರವು, ಅದೇ ರೀತಿ 'ಓ' ಅಥವಾ 'ಔ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಸ್ವರವು ಆದೇಶವಾಗಿ ಬರುತ್ತದೆ. ಇದನ್ನೇ 'ವೃದ್ಧಿ ಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ:** | **ಪೂರ್ವಪದ** | + | **ಉತ್ತರಪದ** | = **ಸಂಧಿಪದ** |
|---|---|---|---|---|
| | ಏಕ | + | ಏಕ | = ಏಕೈಕ |
| | ಭಾವ | + | ಐಕ್ಯ | = ಭಾವೈಕ್ಯ |
| | ಜಲ | + | ಓಘ | = ಜಲೌಘ |
| | ದಿವ್ಯ | + | ಔಷಧಿ | = ದಿವ್ಯೌಷಧಿ |

4. **ಯಣ್ ಸಂಧಿ:** ಪೂರ್ವಪದದ ಅಂತ್ಯದಲ್ಲಿನ ಇ, ಈ, ಉ, ಊ, ಋ ಸ್ವರಗಳಿಗೆ ಅನ್ಯ ಸ್ವರಗಳು ಪರವಾದಾಗ 'ಇ', 'ಈ' ಸ್ವರಗಳಿಗೆ 'ಯ್' ಕಾರವೂ, 'ಉ', 'ಊ' ಸ್ವರಗಳಿಗೆ 'ವ್' ಕಾರವೂ, 'ಋ' ಸ್ವರಕ್ಕೆ 'ರ್' ಕಾರವು ಆದೇಶವಾಗಿ ಬರುವುದು. ಇದನ್ನು 'ಯಣ್‌ಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ:** | **ಪೂರ್ವಪದ** | + | **ಉತ್ತರಪದ** | = **ಸಂಧಿಪದ** |
|---|---|---|---|---|
| | ಅತಿ | + | ಉಕ್ತಿ | = ಅತ್ಯುಕ್ತಿ |
| | ಮನು | + | ಅಂತರ | = ಮನ್ವಂತರ |
| | ಪಿತೃ | + | ಆರ್ಜಿತ | = ಪಿತ್ರಾರ್ಜಿತ |

**ಸಂಸ್ಕೃತ ವ್ಯಂಜನ ಸಂಧಿಗಳು:**

**1. ಜಸ್ತ್ವ ಸಂಧಿ:** ಪೂರ್ವಪದದ ಕೊನೆಯಲ್ಲಿರುವ ಕ್, ಚ್, ಟ್, ತ್, ಪ್ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು (ಗ್,ಜ್,ಡ್,ದ್,ಬ್,) ಆದೇಶವಾಗಿ ಬರುತ್ತವೆ. ಇದನ್ನು 'ಜಸ್ತ್ವ ಸಂಧಿ' ಎನ್ನುತ್ತಾರೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ವಾಕ್ | + | ದೇವಿ | = ವಾಗ್ದೇವಿ |
| | ಅಚ್ | + | ಅಂತ | = ಅಜಂತ |
| | ಷಟ್ | + | ಆನನ | = ಷಡಾನನ |

**2. ಶ್ಚುತ್ವ ಸಂಧಿ:** ಪೂರ್ವಪದದ ಕೊನೆಯಲ್ಲಿ ಸಕಾರ ಇಲ್ಲವೇ ತವರ್ಗಾಕ್ಷರಗಳಿಗೆ ಶಕಾರ ಇಲ್ಲವೇ ಚ ವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ. ಇದನ್ನು 'ಶ್ಚುತ್ವ ಸಂಧಿ' ಎನ್ನುತ್ತಾರೆ.

| ಉದಾ: | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಮನಸ್ | + | ಶುದ್ಧಿ | = ಮನಶ್ಶುದ್ಧಿ |
| | ಸತ್ | + | ಚಿತ್ರ | = ಸಚ್ಚಿತ್ರ |
| | ಜಗತ್ | + | ಜ್ಯೋತಿ | = ಜಗಜ್ಜ್ಯೋತಿ |

**3. ಅನುನಾಸಿಕ ಸಂಧಿ:** ವರ್ಗ ಪ್ರಥಮ ಅಕ್ಷರಗಳಿಗೆ ಯಾವ ಅನುನಾಸಿಕ ಅಕ್ಷರ ಪರವಾದರೂ ಅವುಗಳಿಗೆ ಅಂದರೆ ಕ್, ಚ್, ಟ್, ತ್, ಪ್, ವ್ಯಂಜನಗಳಿಗೆ ಕ್ರಮವಾಗಿ ಅದೇ ವರ್ಗದ ಙ್, ಞ್, ಣ್, ನ್, ಮ್, ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| | | | | |
|---|---|---|---|---|
| **ಉದಾ: ಪೂರ್ವಪದ** | **+** | **ಉತ್ತರಪದ** | **=** | **ಸಂಧಿಪದ** |
| ದಿಕ್ | + | ನಾಗ | = | ದಿಙ್ನಾಗ |
| ಷಟ್ | + | ಮಾಸ | = | ಷಣ್ಮಾಸ |
| ಚಿತ್ | + | ಮೂಲ | = | ಚಿನ್ಮೂಲ |